MYSORE LEGISLATIVE ASSEMBLY

TWENTY-THIRD DAY

Tuesday, 5th April 1960.

The House met in the Assembly Hall, Vidhana Soudha, Bangalore, One of the Clock.

MR. SPEAKER (SRI S. R. KANTHI, B.A., LL.B.) in the Chair.

Members' Representation.

Sri B. K. PUTTARAMIYA (Channapatna).—What happened to my notice of privilege, Sir?

Mr. SPEAKER.—I am examining it.

ಶ್ರೀ ಎಂ. ಹನುಮಂತಯ್ಯ (ನೆಲಮಂಗಲ).—ಇವೊತ್ತು ಪ್ರಶ್ನೋತ್ತರಗಳು ಬರಬೇಕಾಗಿದ್ದುವು. ಆ ರೀತಿ ಬಾರದೇ ಇರುವುದಕ್ಕೆ ಕಾರಣವೇನು ?

ಅಧ್ಯಕ್ಷರು.—ಸರ್ಕಾರದಿಂದ ಸಾಕಷ್ಟು ಉತ್ತರಗಳು ಇನ್ನೂ ಬಂದಿಲ್ಲ. ಆ ಉತ್ತರಗಳು ನಮಗೆ ಬರುವುದು ಸ್ವಲ್ಪ ನಿಧಾನವಾಗಿದೆ. ಈಗಾಗಲೇ 420 ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಾಗಿದೆ. ಇನ್ನು 15 ದಿವಸಗಳೊಳಗೆ ಉಳಿದಿರುವಕ್ಕ ಪ್ರಶ್ನೆಗಳಿಗೆ ಉತ್ತರಗಳು ಬರುತ್ತವೆ. ಕೆಲವು ಪ್ರಶ್ನೆಗಳ ನೋಟೀಸ್ ಸ್ವಲ್ಪ ತಡವಾಗಿ ಬಂದಿತು. ಅದಕ್ಕೋಸ್ಕರ ಸಾಕಷ್ಟು ಉತ್ತರಗಳು ಬಂದಿಲ್ಲ. ಆದುದರಿಂದ ಪ್ರಶ್ನೋತ್ತರಗಳನ್ನು ಈ ದಿನ ತೆಗೆದುಕೊಂಡಿಲ್ಲ; ನಾಳೆ ದಿನ ಬರಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಈಗ ಎಷ್ಟು ಪ್ರಶ್ನೆಗಳಿಗೆ ಇದುವರೆಗೆ ಉತ್ತರ ಬಂದಿದೆ ?

ಅಧ್ಯಕ್ಷರು.—ಇದುವರೆಗೆ 420 ಪ್ರಶ್ನೆಗಳಿಗೆ ಉತ್ತರ ಬಂದಿದೆ. ಅವುಗಳೆಲ್ಲಕ್ಕೂ ಸಂಪೂರ್ಣವಾಗಿ ಉತ್ತರವನ್ನು ಕೂಡ ಕೊಡಲಾಗಿದೆ. ಒಟ್ಟು 692 ಪ್ರಶ್ನೆಗಳು ಈ ಸಲ ಬಂದುದು. ಅವುಗಳಲ್ಲಿ 592ಕ್ಕೆ ಅವಕಾಶ ಕೊಡಲಾಗಿದೆ. ಸರ್ಕಾರಕ್ಕೆ ಉತ್ತರಕ್ಕಾಗಿ ಕಳುಹಿಸಿದ್ದವು 506, ಈಗಾಗಲೇ 420 ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಾಗಿದೆ. ಇನ್ನುಳಿದ ಪ್ರಶ್ನೆಗಳಿಗೆ ಇಷ್ಟರಲ್ಲೇ ಉತ್ತರಗಳು ಬರುತ್ತವೆ; ಅಷ್ಟು ಪ್ರಶ್ನೆಗಳಿಲ್ಲ; ಎಲ್ಲೋ ಸ್ವಲ್ಪ ಪ್ರಶ್ನೆಗಳಿವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ಪ್ರಶ್ನೆಗಳಿಗೆ ಉತ್ತರ ಬರಬೇಕು ? ನನಗೆ ಸರಿಯಾಗಿ ತಿಳಿಸಿ.

Mr. SPEAKER.—The total number of questions that have been tabled is 692. Out of that, 592 have been admitted. Of that, 506 have been sent to the Government out of the member 420 have been answered already. ಇನ್ನು 86 ಪ್ರಶ್ನೆಗಳಿಗೆ ಉತ್ತರ ಬರಬೇಕು.

Sri KADIDAL MANJAPPA (Minister for Revenue).—Sir, these questions, I understand involve the collection of detailed statistics and that is the reason why it is delayed. Compared to the large number of questions which have been already answered by the Government, the questions remaining are very few. We are going to furnish information in respect of these questions also very early. After all, only a small number of questions are left over.

*ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಪ್ರಶ್ನೆಗಳು ಸ್ವಲ್ಪ ಇವೆ; ಬಹಳ ಇವೆ ಎಂಬ ಪ್ರಶ್ನೆಯಲ್ಲ. ಈ ಪ್ರಶ್ನೋತ್ತರಗಳ ಚರ್ಚೆಮಾಡುವುದು ಮಾನ್ಯ ಸದಸ್ಯರ ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟುದು. ಅದರಲ್ಲಿಯೂ ಕಾನೂನಿನ ಪ್ರಕಾರ, ಅಂದರೆ, ರೂಲ್ಸ್‌ಆಫ್ ಪ್ರೊಸೀಜರ್‌ನಲ್ಲಿ 40ನೇಯ ಕ್ಲಾಜು ಪ್ರಕಾರ 15 ದಿವಸಗಳೊಳಗಾಗಿ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕೆಂದಿದೆ. ಆ ರೀತಿ ಸರ್ಕಾರದವರು ಉತ್ತರಗಳನ್ನು ಕೊಡಲೇ ಬೇಕಾಗಿದೆ. ಒಂದು ವೇಳೆ ಆ ರೀತಿ ಕೊಡದೇ ಹೋದರೆ ಮುಂದೆ ಇನ್ನು ಹದಿನೈದು ದಿವಸಗಳನ್ನು ತೆಗೆದುಕೊಂಡು 30 ದಿವಸಗಳಲ್ಲಿಯಾದರೂ ಉತ್ತರವನ್ನು ಕೊಡಲಕ್ಕೇ ಬೇಕು ಎಂಬುದಾಗಿ ಕಾನೂನು ಇದೆ. ಹೀಗಿರುವಾಗ ನಾನು ಹಿಂದಿನ ಸಾರಿ ಅನೇಕ

*Asterisk indicates that the remarks or speeches have not been revised by the member concerned.

(ಶ್ರೀ ಕೆ. ಕೆಂಚಪ್ಪ)

ಪ್ರಶ್ನೆಗಳನ್ನು ಕಳುಹಿಸಿದ್ದೇನೆ. ಆಗಲೂ ಉತ್ತರಗಳು 15 ದಿವಸಗಳೊಳಗಾಗಿ ಕಾನೂನು ಪ್ರಕಾರ ಬರಲಿಲ್ಲ, ನಂತರ ಇನ್ನು ಹದಿನೈದು ದಿವಸಗಳನ್ನು ತೆಗೆದುಕೊಂಡು 30 ದಿವಸಗಳೊಳಗೆ ಆದರೂ ಉತ್ತರಗಳನ್ನು ಕಳುಹಿಸುತ್ತಾರೆಂದು ನಾನು ಅಂದುಕೊಂಡಿದ್ದೆ. ಆಗಲೂ ಕಾನೂನು ಪ್ರಕಾರ ಉತ್ತರಗಳು ನನ್ನ ಪ್ರಶ್ನೆಗಳಿಗೆ ಬಾರದೆ ಹೋದುವು. ಪ್ರಶ್ನೆಗಳು ಹಾಗೆಯೇ ಉಳಿದುಹೋಗಿ ಮಾನ್ಯ ಸದಸ್ಯರ ಹಕ್ಕುಬಾಧ್ಯತೆಗೆ ಚ್ಯುತಿ ಬಂದಿದ್ದಾಗಿದೆ. ಆ ಪ್ರಶ್ನೆಗಳನ್ನು ಕುರಿತು ನಾನು ನಾಲ್ಕಾರು ಕಾಗದಗಳನ್ನು ಬರೆದಿದ್ದೇನೆ. ಈ ಪ್ರಶ್ನೋತ್ತರಗಳ ವಿಚಾರದಲ್ಲಿ ಸರ್ಕಾರದವರಲ್ಲಿ ಸಾಕಷ್ಟು ಉತ್ತೇಜನವಿಲ್ಲದೇ ಇರುವುದನ್ನು ನಾವು ಸಹಿಸುವುದಕ್ಕೆ ಸಾಧ್ಯವಿಲ್ಲ. ಅದು ಸರ್ಕಾರದ ಹಾಗೂ ನಮ್ಮ ಕರ್ತವ್ಯ. ಸರ್ಕಾರದವರು ಇಷ್ಟು ಉಪೇಕ್ಷೆಯಿಂದ ಈ ವಿಚಾರದಲ್ಲಿ ಗಮನ ಕೊಡುವುದು ಖಂಡಿತವಾಗಿ ಸಾಧುವಾದುದಲ್ಲ. ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಬೇಕೆಂಬುದು ಮೊದಲಿನಿಂದಲೂ ಬಂದಿರತಕ್ಕ ಒಂದು ಚಾಲ್ತಿ. ಆ ಪ್ರಕಾರ ಉತ್ತರಗಳನ್ನು ಸರ್ಕಾರದವರು ಕಾನೂನಿಗನುಸಾರವಾಗಿ ಕೊಡಲಿಕ್ಕೆ ಬೇಕು. ಒಂದು ವೇಳೆ ಇನ್ನು ಹದಿನೈದು ದಿವಸಗಳನ್ನು ತೆಗೆದುಕೊಂಡು 30 ದಿವಸಗಳೊಳಗೆ ತಡವಾಗಿ ಉತ್ತರ ಕೊಡುವುದಾದರೆ, ಅದರಿಂದ ನಮಗೆ ಬಹಳ ನೋವು ಇದೆ. ಅದನ್ನು ಸರ್ಕಾರ ಮನಗಾಣಬೇಕು.

ಅಧ್ಯಕ್ಷರು.—ನಾನು ಸಂಪೂರ್ಣವಾಗಿ ಹೇಳುವ ವರೆಗೆ ಕೇಳಬೇಕು. ನನಗೆ ಪೂರ್ಣವಾಗಿ ಹೇಳುವುದಕ್ಕೆ ಅವಕಾಶ ಕೊಟ್ಟರೆ, ತಾವು ಚೆನ್ನಾಗಿ ವಿಷಯಗಳನ್ನು ತಿಳಿದುಕೊಳ್ಳಬಹುದು.

ಶ್ರೀ ಕೆ. ಕೆಂಚಪ್ಪ.—ನೀವು ಪೂರ್ಣವಾಗಿ ಹೇಳಿ; ನಾನು ಆಮೇಲೆ ಮಾತನಾಡುತ್ತೇನೆ.

Mr. SPEAKER.—Number of Questions to which replies were received within 15 days. 84

Number of Questions to which answers were received after 18 days but within one month. 336

Total ... 420

So, there are still about 86 questions to which answers are due from the Government.

ಇನ್ನೊಂದು ವಿಷಯ. ಸರ್ಕಾರದವರಿಗೆ ಒಂದು ವೇಳೆ 15 ದಿವಸಗಳೊಳಗೆ ಉತ್ತರ ಕೊಡುವುದಕ್ಕಾಗದೇ ಇದ್ದರೆ, ಮತ್ತೆ 15 ದಿವಸಗಳನ್ನು ಕಾನೂನು ಪ್ರಕಾರ ಕೇಳುತ್ತಾರೆ. ಈಗ 86 ಪ್ರಶ್ನೆಗಳಿವೆ. ಅವನ್ನು ಸರ್ಕಾರಕ್ಕೆ ಕಳುಹಿಸಿ ಒಂದು ತಿಂಗಳು ಆಯಿತೋ ಅಥವಾ 15 ದಿವಸಗಳಾಯಿತೋ ಎಂಬುದನ್ನು ತಿಳಿಸಲಿಕ್ಕೆ ನನ್ನಲ್ಲಿ ಸ್ಟೇಟ್‌ಮೆಂಟ್ ಇಲ್ಲ. ಸುಮಾರು ಒಂದು ತಿಂಗಳಾಗಿರಬೇಕೆಂದು ನಾನು ತಿಳಿದಿದ್ದೇನೆ. ಸರ್ಕಾರದವರೂ ಸಹ ಈಗ ತಾನೇ ಕೆಲವು ಪ್ರಶ್ನೆಗಳಿಗೆ ಸ್ಯಾಟಿಸ್ಫಿಕಲ್ ಇಂಫರ್‌ಮೇಷನ್ ತರಿಸಿಕೊಳ್ಳಬೇಕಾಗಿದೆ; ಆ ರೀತಿ ಮಾಹಿತಿಗಳು ಬಂದತಕ್ಷಣ ಉತ್ತರಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಒಂದು ತಿಂಗಳಮೇಲ್ಪಟ್ಟು ಆ ಪ್ರಶ್ನೆಗಳು ಉಳಿದಿವೆ ಎಂದು ಹೇಳುವುದಕ್ಕೆ ಯಾವ ರೀತಿಯಲ್ಲೂ ಆಸ್ಪದವಿಲ್ಲವೆಂದು ನನಗೆ ಕಾಣುತ್ತದೆ.

ಶ್ರೀ ಕೆ. ಕೆಂಚಪ್ಪ.—ನಾವೀಗ ಈ ಪ್ರಶ್ನೋತರಗಳ ಬಗ್ಗೆ ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ತೀವ್ರವಾಗಿ ಪರಿಶೀಲಿಸತಕ್ಕಂಥ ಕಾಲ ಈಗ ನನ್ನಿಹತವಾಗಿದೆ. ಹೀಗಿರುವಾಗ ಅಧ್ಯಕ್ಷರು ನಾವು ಕಳುಹಿಸಿದ್ದ ಪ್ರಶ್ನೆಗಳ ಪೈಕಿ ಕೆಲವಕ್ಕೆ 15 ದಿವಸಗಳಲ್ಲೇ ಉತ್ತರ ಕೊಡಲಾಗಿದೆ ಎಂದು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ನಾನು ಇಲ್ಲಗೆ 15 ದಿವಸಗಳ ಹಿಂದೆ ಕಳುಹಿಸಿದ್ದ ಪ್ರಶ್ನೆಗಳಿಗೆ ಉತ್ತರಗಳಿನ್ನೂ ಬಂದೇ ಇಲ್ಲ.

ಅಧ್ಯಕ್ಷರು.—ಹಾಗೆ ನಿಮ್ಮ ಯಾವ ಪ್ರಶ್ನೆಗೆ ಉತ್ತರ ಬಂದಿಲ್ಲವೆಂದು ಹೇಳಿದರೆ ಅದನ್ನು ನಾನು ವಿಚಾರ ಮಾಡುತ್ತೇನೆ.

ಶ್ರೀ ಕೆ. ಕೆಂಚಪ್ಪ.—ನಾನು ಹೇಳುತ್ತಿರುವುದು ಕೇವಲ ನನ್ನೊಬ್ಬನ ಪ್ರಶ್ನೆಗಲ್ಲ. ಅನೇಕ ಸದಸ್ಯರುಗಳ ಪ್ರಶ್ನೆಗೆ ಉತ್ತರವಿನ್ನೂ ಬಂದಿರುವುದಿಲ್ಲ. ಕೆಲವಕ್ಕೆ ಮಾತ್ರ ಉತ್ತರಗಳು ಬಂದಿವೆ. ಬಾಕಿ ಪ್ರಶ್ನೆಗಳಿಗೆ ಉತ್ತರಗಳಿನ್ನೂ ಬಂದಿಲ್ಲ. ಮೇಲಾಗಿ ನಮ್ಮ ಪ್ರಶ್ನೆಗಳಿಗೆ ಸರ್ಕಾರದವರು ಉತ್ತರ ಕೊಡುವಾಗ ಅವುಗಳಿಗೆ ಅಪಾಯಿಡ್‌ಮಾಡಲು ಏನೇನೋ ಹೇಳುತ್ತಾ ನೇರವಾದ ಉತ್ತರಗಳು ದೊರೆಯುತ್ತಿಲ್ಲ. ಇದರಿಂದ ಸದಸ್ಯರ ಮನಸ್ಸಿಗೆ ಬಹಳ ನೋವುಂಟಾಗಿರುತ್ತದೆ. ಹೀಗಾಗಿ ನಾವು ಪ್ರಶ್ನೆಗಳಬಗ್ಗೆ ಉತ್ತರ ಪಡೆಯುತ್ತಿರುವ ವಿಧಾನ ಸರಿಯಾಗಿರುವುದಿಲ್ಲವೆಂದು ನಾನು ಭಾವಿಸಿದ್ದೇನೆ.

ಅಧ್ಯಕ್ಷರು.—ತಾವು ಹೀಗೆಲ್ಲ ಜನರಲ್ ಆಗಿ ಮಾತನಾಡಿದರೆ ಸರಿಹೋಗುವುದಿಲ್ಲ. ತಾವು ತಮ್ಮ ಯಾವ ಪ್ರಶ್ನೆಗೆ ಉತ್ತರ ಬಂದಿಲ್ಲ ಎಂಬುದನ್ನು ತಿಳಿಸಿ, ತಾವು ಕೊಟ್ಟರೆ ನಾನು ಆಗ ನಿಮ್ಮ ಪ್ರಶ್ನೆಗಳಿಗೆ ಉತ್ತರ ತರಿಸಿ, ಕೊಡಲು ಪ್ರಯತ್ನ ಮಾಡುತ್ತೇನೆ. ಎರಡನೆಯವರ ವಿಚಾರದಲ್ಲೂ ಹೀಗೆಯೆ ಉತ್ತರವಾರದೆ ಇದ್ದರೆ ಅವರೂ ತಿಳಿಸಲಿ, ನಾನು ಆಗ ಆ ವಿಚಾರಗಳನ್ನೆಲ್ಲ ವಿಶದವಾಗಿ ನೋಡುತ್ತೇನೆ. ಆದರೆ ಸರ್ಕಾರದವರು ಸರಿಯಾಗಿ ಉತ್ತರ ಕೊಡುತ್ತಿಲ್ಲವೆಂದು ತಾವು ಹೇಳುವ ವಾದವನ್ನು ನಾನು ಒಪ್ಪುವುದಕ್ಕೆ ಆಗುವುದಿಲ್ಲ. ಸರ್ಕಾರದವರು ಕೊಡತಕ್ಕ ಉತ್ತರಗಳೇನಿರುತ್ತವೋ ಅವುಗಳೆಲ್ಲ ಸರಿಯಾಗಿಯೇ ಇರುತ್ತವೆಯೆಂದು ಭಾವಿಸಬೇಕು ಎಂದು ಕಾನೂನೇ ಇದೆ; ಆ ರೀತಿ ನಿಯಮವಿರುವಾಗ ತಾವು ಹಾಗೆ ಹೇಳಬಾರದುತಮ್ಮ ಪ್ರಶ್ನೆಗೆ ಉತ್ತರ ಬಾರದೆ ಇದ್ದರೆ ಅದು ಯಾವ ಪ್ರಶ್ನೆ ಎಂಬುದನ್ನು ನನಗೆ ತಂದುತೋರಿಸಿ. ನಾನು ಅದನ್ನು ಸರ್ಕಾರಕ್ಕೆ ಕಳುಹಿಸಿ, ಉತ್ತರ ತರಿಸಿ ಕೊಡುತ್ತೇನೆ. ಅಷ್ಟು ಬಿಟ್ಟಾಯಿ ಈಗ ತಾವೇನು ಒಂದು ಗ್ರಹಿಕೆ ಮಾಡಿಕೊಂಡು ಹೇಳುತ್ತಿದ್ದೀರೋ ಅದು ಸರಿಯಾದದ್ದಲ್ಲ.

ಶ್ರೀ ಕೆ. ಕೆಂಚಪ್ಪ.—ನಾವು ಪ್ರಶ್ನೋತ್ತರಗಳ ವಿಧಾನ ಯಾವ ರೀತಿಯಾಗಿರಬೇಕೆಂಬ ವಿಚಾರವನ್ನು ತೀವ್ರವಾಗಿ ಪರಿಶೀಲಿಸಬೇಕಾದಂಥ ಸನ್ನಿವೇಶ ಈಗ ಉದ್ಭವವಾಗಿದೆ.

ಅಧ್ಯಕ್ಷರು.—ಈಗ ಆ ಪ್ರಶ್ನೆಯೇ ಉದ್ಭವವಾಗಿಲ್ಲ. ತಮ್ಮ ಪ್ರಶ್ನೆಗೆ ಯಾವ ರೂಲ್ಸು ಪ್ರಕಾರ

ಉತ್ತರಬಂದಿಲ್ಲ, ಯಾವ ರೂಲ್ಸು ಉಲ್ಲಂಘನೆ ಆಗಿದೆ, ಯಾವ ರೂಲ್ಸನ್ನು ಮುರಿದಿದ್ದಾರೆ ಎಂಬುದನ್ನು ತಿಳಿಸಿ—ಅವನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಮಂಜಪ್ಪ ಉಳ್ಳಾಳ್ (ಕಾರ್ಕಳ).—ನನ್ನ ಪ್ರಶ್ನೆಗೂ ಸಹ ಉತ್ತರ ಬಂದಿಲ್ಲ.

ಅಧ್ಯಕ್ಷರು.—ಈ ವರೆಗೂ ಶ್ರೀ ಕೆಂಚಪ್ಪನವರಿಗೇನು ಉತ್ತರ ಹೇಳಿದ್ದೇನೋ ಅದೇ ಉತ್ತರ ತಮಗೂ ಹೇಳಬೇಕಾಗಿದೆ. ತಾವು ಯಾವ ಪ್ರಶ್ನೆಗೆ ಉತ್ತರ ಬಂದಿಲ್ಲ ಎಂಬುದನ್ನು ಬರೆದು ಕೊಟ್ಟರೆ ನಾನು ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎಂ. ರಾಮಪ್ಪ (ಹರಿಹರ).—ದಿವಸಕ್ಕೆ 15—20 ಪ್ರಶ್ನೆತೆಗೆದುಕೊಳ್ಳುವ ಬದಲು ಪ್ರತಿ ದಿವಸವೂ ಐದು ಅರು ಪಶ್ನೆಗಳಿಗೆ ಕಡಮೆ ಇಲ್ಲದಂತೆ ಒಂದು ಏರ್ಪಾಡನ್ನು ಮಾಡಿದ್ದರೆ ಚೆನ್ನಾಗಿರುತ್ತಿತ್ತಲ್ಲವೇ ?

ಅಧ್ಯಕ್ಷರು.—ಆದರೆ ನಾವು ಈಗ ಅನುಸರಿಸುತ್ತಿರುವ ವಿಧಾನ ಹೇಗೆ ಇದೆ ಎಂದರೆ, ನಮಗೆ ಒಟ್ಟು ಎಷ್ಟು ಪ್ರಶ್ನೆಗಳು ಬರುತ್ತವೆ ಎಂಬುದನ್ನು ನೋಡಿಕೊಂಡು, ಆ ಹೊತ್ತಿಗೆ ಸರಕಾಲಕ್ಕೆ ಸರಿಯಾಗಿ ಎಷ್ಟು ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬರಬಹುದೆಂಬುದನ್ನು ಅಂದಾಜುಮಾಡಿ, ಅನಂತರ ನಮ್ಮ ಅಧಿವೇಶನ ಎಷ್ಟು ದಿವಸ ಕುಳಿತುಕೊಳ್ಳಬಹುದು ಎಂಬುದನ್ನೆಲ್ಲಾ ಲೆಕ್ಕಹಾಕಿಕೊಂಡು ಅದರ ಪ್ರಕಾರ ದಿನಕ್ಕೆ ಇಷ್ಟಿಷ್ಟು ಪ್ರಶ್ನೆಗಳನ್ನು ತೆಗೆದುಕೊಳ್ಳಬೇಕು ಎಂಬುದನ್ನು ನಿರ್ಧರಿಸಲಾಗುತ್ತದೆ. ಇದರಂತೆ ಇಲ್ಲಿಯವರೆಗೂ ದಿನಕ್ಕೆ 15—20 ಪ್ರಶ್ನೆಗಳನ್ನು ತೆಗೆದುಕೊಳ್ಳಲಾಗುತ್ತದೆ. ಹೀಗಿರುವಾಗ ದಿನಕ್ಕೆ 10—15 ಪ್ರಶ್ನೆಗಳನ್ನು ತೆಗೆದುಕೊಂಡರೂ ನಮ್ಮ ಪ್ರಶ್ನೆಗಳು ಲ್ಯಾಪ್ಸಾಗುತ್ತಿರುವಾಗ ನಾಲ್ಕು ಐದು ಪ್ರಶ್ನೆಗಳನ್ನು ದಿನಕ್ಕೆ ನಿಗದಿಮಾಡಿದರೆ ನಮ್ಮ ಪ್ರಶ್ನೆಗಳೆಲ್ಲಲ್ಯಾಪ್ಸಾಗ ಬೇಕಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಅವರು ಹೇಳಿದ ಅಭಿಪ್ರಾಯ ಹಾಗಲ್ಲ. ಯಾವ ದಿವಸವೇ ಆಗಲಿ ಪ್ರಶ್ನೆಗಳೇ ಇಲ್ಲವೆಂದು ಹೇಳದೆ ಇರುವ ಹಾಗೆ ಒಂದು ಪದ್ಧತಿಯನ್ನು ಹಾರಿಗೆತರ ಬೇಕೆಂದು ಅವರು ಹೇಳಿದ್ದು.

ಅಧ್ಯಕ್ಷರು.—ಇನ್ನು ಳಿದಿರತಕ್ಕ ಪ್ರಶ್ನೆಗಳೆಲ್ಲ ಸ್ವಲ್ಪ ಮಾತ್ರ ಇವೆ. ಅವರು ಹೇಳುವಂತೆ ದಿನಕ್ಕೆ ನಾಲ್ಕು ಐದು ಪ್ರಶ್ನೆಗಳನ್ನು ತೆಗೆದುಕೊಂಡರೆ ಇಲ್ಲ ಉಪ ಪ್ರಶ್ನೆಗಳಿಗೆ ವಿಶೇಷ ಕಾಲಾವಕಾಶ ಕೊಡಬೇಕಾಗುತ್ತದೆ. ಅನಂತರ ಹೆಚ್ಚು ಪ್ರಶ್ನೆಗಳು ಬಂದದಿವಸ ಇಲ್ಲ ಉಪಪ್ರಶ್ನೆಗಳನ್ನು ಕಂಟ್ರೋಲ್ ಮಾಡಲು ನನಗೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಆ ಪದ್ಧತಿಯನ್ನು ಕೈಬಿಡಲಾಗಿದೆ.

ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಅಧ್ಯಕ್ಷರೇ, ಈ ಹಿಂದಿನ ಅಧಿವೇಶನದಲ್ಲಿ ಮಂತ್ರಿಗಳು ಉತ್ತರ ಕೊಡುವಾಗ ಅದನ್ನು ಯಾರಾದರೂ ಸುಳ್ಳು ಎಂದು ಹೇಳಿದಾಗ ತಾವು ಆ ಬಗ್ಗೆ ನನಗೆ ರಿಪೋರ್ಟ್ಕೊಡಿ ಅದನ್ನು ನಾನು ಎಕ್ಸ್ಪೈರಿ ಮಾಡುತ್ತೇನೆ ಎಂದು ಹೇಳಿದ್ದಿರಿ. ಹಾಗೆ ತಾವು ಒಂದು ರೀಪೋರ್ಟು ತೆಗೆದುಕೊಂಡು ಅದನ್ನು ಎನ್ಕ್ವೈರಿ ಮಾಡತಕ್ಕ ಬಗ್ಗೆ ತಮಗೆ ಯಾವ ಅಧಿಕಾರದ ಪ್ರಕಾರ, ಯಾವ ರೂಲ್ಸು ಪ್ರಕಾರ ಅವಕಾಶವಿದೆ ಎಂಬುದನ್ನು ಹೇಳಬೇಕು.

ಅಧ್ಯಕ್ಷರು.—ಮಂತ್ರಿಗಳು ಸರ್ಕಾರದ ಪರವಾಗಿ ಕೊಡತಕ್ಕ ಉತ್ತರಗಳನ್ನು ಸುಳ್ಳು ಎಂದು ಹೇಳುವುದಕ್ಕೆ ಬರುವುದಿಲ್ಲವೆಂಬುದು ಮೊದಲನೆಯ ವಿಚಾರ. ಒಂದು ವೇಳೆ ಅವರು ಹಾಗೆ ಸುಳ್ಳುಉತ್ತರ ಹೇಳಿದ್ದಾರೆಂದು ಮಾನ್ಯ ಸದಸ್ಯರು ನನ್ನಲ್ಲಗೆ ಪ್ರೈವೇಟಾಗಿ ಬಂದು ಹೀಗೆ ಮಂತ್ರಿಗಳು ಕೊಟ್ಟಿರುವ ಉತ್ತರ ಸರಿಯಾಗಿಲ್ಲವೆಂದು ಸಿದ್ಧ ಮಾಡಿ ಕೊಟ್ಟರೆ ಆಗ ನಾನು ಸರ್ಕಾರದವರಿಗೆ ಏಕೆ ನೀವು ಇಂಥ ಪ್ರಶ್ನೆಗೆ ಸರಿಯಾದ ಉತ್ತರ ಒದಗಿಸಿಲ್ಲ ಎಂದು ಕೇಳಲಕ್ಕೆ ಬರುತ್ತದೆ. ಹಾಗೆ ಮಂತ್ರಿಗಳು ಕೊಟ್ಟ ಉತ್ತರ ಸರಿಯಾಗಿಲ್ಲವೆಂದು, ಅದು ವ್ಯತಿರಿಕ್ತವಾಗಿದೆಯೆಂದು ರುಜುವಾತುಮಾಡಿಕೊಟ್ಟಲ್ಲಿ ಸರ್ಕಾರದ ವರನ್ನು ಕೇಳತಕ್ಕ ಒಂದು ಅಧಿಕಾರ ನನಗೆ ಅಂದರೆ ಈ ''ಥ್ರೀರಿಗೆ'' ಬಂದಿರತಕ್ಕ ಅಧಿಕಾರಗಳಲ್ಲಿ ಅದು ಇನ್ಹೆರೆಂಟ್ ಆಗಿದೆ. ಆ ಅಧಿಕಾರದ ಪ್ರಕಾರ ಕೇಳಲು ನನಗೆ ಒಂದು ಅವಕಾಶವನ್ನು ಆ ಅಧಿಕಾರವೇ ನೀಡಿದೆ. ಅದು ಥ್ರೀರಿನ ಇನ್ಹಿರೆಂಟ್ರೈಟ್.

ಶ್ರೀ ಎ. ಮುನಿಯಪ್ಪ.—ಈ ವಿಚಾರದಲ್ಲಿ ಆ ರೀತಿ ಮಂತ್ರಿಗಳನ್ನು ವಿಚಾರ ಮಾಡುವುದಕ್ಕೆ ತಮಗೆ ಯಾವ ಅಧಿಕಾರವಿದೆ ಎಂಬುದನ್ನು ಕುರಿತು ನಾನು ಇಲ್ಲಿಗೆ ನಾಲ್ಕು ತಿಂಗಳ ಹಿಂದೆಯೇ ತಮಗೊಂದು ಪತ್ರ ಬರೆದಿದ್ದೆ. ಅದಕ್ಕೆ ಈ ತಹಲ್ವರೆಗೂ ಉತ್ತರವೇ ಇಲ್ಲ. ಹೋದ ಅಧಿವೇಶನದಲ್ಲಿ ನಡೆದ ವಿಚಾರ. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ಇನ್ನು ನಾವು ಆ ಭಗವಂತನನ್ನೇ ಶಿವನನ್ನೇ ಕೇಳಬೇಕೋ ಏನೋ !

ಅಧ್ಯಕ್ಷರು.—ತಾವು ಬರೆದಿರುತ್ತೇನೆಂದು ಹೇಳುತ್ತಿರುವ ಪತ್ರ ನನಗೆ ಬಂದಿಲ್ಲ. ತಾವು ಬರೆದರೆ ಅದಕ್ಕೆ ನಾನು ನನಗೆ ಯಾವ ಅಧಿಕಾರ ಇದೆ, ಯಾವ ರೀತಿ ನನಗೆ ಆ ಅಧಿಕಾರ ಬಂದಿರುತ್ತದೆಂಬುದನ್ನು ತಮಗೆ ಅಥಾರಿಟೇಟಿವ್ ಆಗಿ ಬರೆದು ಕಳುಹಿಸುತ್ತೇನೆ.

ಶ್ರೀ ಎ. ಮುನಿಯಪ್ಪ.—ನಾನು ತಮಗೆ ನಾಲ್ಕು ತಿಂಗಳ ಹಿಂದೆ ಪತ್ರ ಬರೆದಿದ್ದಕ್ಕೆ ಇಲ್ಲಯವರೆಗೂ ಉತ್ತರ ಬಾರದಿರುವಾಗ ತಮ್ಮಲ್ಲಿ ನಮಗೆ ಇನ್ನೆಷ್ಟರ ಮಟ್ಟಿಗೆ ವಿಶ್ವಾಸವಿರುತ್ತದೆ ಎನ್ನುವುದನ್ನು ತಾವೇ ಆಲೋಚನೆ ಮಾಡಿಕೊಳ್ಳಬೇಕಾಗಿದೆ.

ಅಧ್ಯಕ್ಷರು.—ತಮ್ಮ ಪತ್ರವೇ ನನಗೆ ಬಂದಿಲ್ಲವೆಂದು ಹೇಳುತ್ತಿದ್ದೇನೆ. ಈಗ ತಾವು ಹೇಳುತ್ತಿರುವ ವಿಚಾರ ಅನಂತರ ಮಾತನಾಡಿಕೊಳ್ಳೋಣ. ತಮ್ಮ ಪತ್ರ ಇಲ್ಲಯವರೆಗೂ ನನ್ನಕೈಗೆ ಬಂದಿಲ್ಲ. ಆದಾಗ್ಯೂ ನಾನು ಇನ್ನೊಮ್ಮೆ ವಿಚಾರಮಾಡಿ ನೋಡುತ್ತೇನೆ. ಬಾಕಿವಿಚಾರಗಳನ್ನು ಕುರಿತು ಅನಂತರ ಮಾತನಾಡಿ ಕೊಳ್ಳೋಣ.

ಶ್ರೀ ಎ. ಮುನಿಯಪ್ಪ.—ಹೀಗೆ ನಾಲ್ಕುತಿಂಗಳು ಗತಿಸಿ ಹೋದರೂ ಹರಿಜನರ ವಿಚಾರದಲ್ಲಿ ತಮಗೆ ಅಭಿಮಾನವಿರಲಲ್ಲ. ಹೋಗಲಿ ಈಗಲಾದರೂ ತಾವು ಅದನ್ನು ವಿಚಾರ ಮಾಡಿನೋಡುತ್ತೇನೆಂದು ಹೇಳುವಷ್ಟು ಒಳ್ಳೆಯ ಬುದ್ಧಿಯನ್ನು ದೇವರು ತಮಗೆ ಕೊಟ್ಟ ! ಆಗಲಿ.

ಅಧ್ಯಕ್ಷರು.—ಈಗ ಚರ್ಚೆನಡೆಯುತ್ತಿರುವುದು ಪ್ರಶ್ನೆಗಳ ಬಗ್ಗೆ. ಆ ಸಂಭಂಧದಲ್ಲಿ ಈಗ ಚರ್ಚೆಯಾಗುತ್ತಿದೆ.

ಶ್ರೀ ಎಂ. ಹನುಮಂತಯ್ಯ.—ಈ ಹಿಂದೆ ತಾವು ಈ ಸಭೆಯ ಒಬ್ಬ ಸದಸ್ಯರನ್ನು ಯಾವ ಅಧಿಕಾರದ ಮೇಲೆ ಹೊರಗೆ ಹಾಕುತ್ತೇವೆಂದು ಹೇಳಿದಿರಿ ?

ಅಧ್ಯಕ್ಷರು.—ನಾನು ಹೊರಗೆ ಹಾಕುತ್ತೇನೆಂದು ಹೇಳಲಿಲ್ಲ. ಸಭಾ-ಅಧ್ಯಕ್ಷರು ಕೊಡತಕ್ಕ ನೂಚನೆಗಳನ್ನು ಸದಸ್ಯರು ಮನ್ನಣೆ ಮಾಡದೆ ಅವರು ಅವರ ಸ್ಥಾನದಲ್ಲಿ ಕುಳಿತುಕೊಳ್ಳದೆ ಒತ್ತಾಯ ಮಾಡುತ್ತಿದ್ದರು. ಹಾಗೆ ಅವರು ಛೇರಿನ ಡೈರೆಕ್ಷನ್ನನ್ನು ಉದಾಸೀನ ಮಾಡತಕ್ಕ ಪ್ರಸಂಗ ಒದಗಿದರೆ ಆ ಸದಸ್ಯರನ್ನು ಹೊರಗೆ ಹಾಕತಕ್ಕ ಪ್ರಸಂಗ ಬರಬಹುದೆಂದು ಹೇಳಿದ್ದೇನೆ. ಆ ರೀತಿ ಅಸಭ್ಯರೀತಿ ನಡೆಯುವವರನ್ನು ಸಭೆಯಿಂದ ಹೊರಗೆ ಹಾಕತಕ್ಕ ಅಧಿಕಾರ ಛೇರಿಗಿದೆ.

ಶ್ರೀ ಎಂ. ಹನುಮಂತಯ್ಯ.—ತಾವು ಈ ದಿವಸದ ಬೆಳಗಿನ ಪೇಪರನ್ನು ಓದಿದ್ದೀರಾ ?

ಅಧ್ಯಕ್ಷರು.—ಅದು ಅನಾವಶ್ಯಕ. ನಮ್ಮಲ್ಲಿ ಅಧಿಕೃತ ರೆಕಾರ್ಡು ಇದೆ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ತಮ್ಮ ರೆಕಾರ್ಡನ್ನು ನೋಡುವುದು ಇರಲಿ. ಇಲ್ಲಿರತಕ್ಕ ಮಾನ್ಯ ಸದಸ್ಯರುಗಳನ್ನೆಲ್ಲ ಕೇಳಿ.

ಅಧ್ಯಕ್ಷರು.—ತಾವು ರೆಕಾರ್ಡನ್ನು ಮೊದಲು ನೋಡಿ. ಆಗ ನಾನು ತಮಗೆ ಎಲ್ಲ ವಿಚಾರಗಳನ್ನೂ ಕನ್‌ವಿನ್ಸ್ ಮಾಡಿಕೊಡುತ್ತೇನೆ. ನಾನು ನೇರವಾಗಿ ಆ ಮಾತುಗಳನ್ನು ಹೇಳಿಲ್ಲ. ನೀವು ನನ್ನ ಆಜ್ಞೆಯ ಪ್ರಕಾರ ಕುಳಿತುಕೊಳ್ಳದೆ ಹೋದರೆ ಆಗ ನಿಮ್ಮೆನ್ನು ಹೊರಗೆ ಕಳುಹಿಸಬೇಕಾಗುತ್ತದೆಂದು ಹೇಳಿದ್ದೇನೆ, ಅಷ್ಟೆ.

ಶ್ರೀ ಟಿ. ಹನುಮಯ್ಯ.—ತಾವು ಇಲ್ಲಿರತಕ್ಕ ಎಲ್ಲ ಮಾನ್ಯ ಸದಸ್ಯರನ್ನೂ ಕೇಳಿ. ತಾವು ಹಾಗೆಲ್ಲ ಮಿಂಗಲ್ ಮಾಡಿ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಡಿ. ಟಿ. ಸೀತಾರಾಮರಾವ್ (ಭದ್ರಾವತಿ).—ಶ್ರೀ ಟಿ. ಹನುಮಯ್ಯನವರು ಒಂದು ಕ್ಲಾರಿಫಿಕೇಷನ್ ಕೇಳಲು ನಿಂತರು. ಅದಕ್ಕೆ ಉತ್ತರ ಕೊಡುವ ಅಗತ್ಯವಿತ್ತು. ಆದರೆ ತಾವು ಅವಕಾಶವಿಲ್ಲ ಎಂದು ಹೇಳಿದ್ದಿರಿ.....

ಅಧ್ಯಕ್ಷರು.—ತಾವು ತಪ್ಪು ತಿಳಿದು ಕೊಂಡಿದ್ದೀರಿ. ಇಲ್ಲ ಕೇಳಿ. ಯಾವ ಮಾನ್ಯ ಸದಸ್ಯರನ್ನು ಕೇಳುವುದೂ ಬೇಡ. ರೆಕಾರ್ಡ್ ಇದೆ.

ಶ್ರೀ ಎಂ. ಹನುಮಂತಯ್ಯ.—ಹತ್ತು ಸಾವಿರ ರೂಪಾಯಿ ಖರ್ಚುಮಾಡಿಕೊಂಡು ಬಂದದ್ದು ಸದಸ್ಯರನ್ನು ಹೊರಗಡೆ ಹಾಕುವುದಕ್ಕೇ ?

ಅಧ್ಯಕ್ಷರು.—ಆ ಪ್ರಶ್ನೆ ಬರುವುದಿಲ್ಲ. ನನ್ನನ್ನು ಸರ್ಕಾರದವರು ಕಳುಹಿಸದೆ ಇದ್ದರೆ ನಾನು ಹೋಗುತ್ತಲೇ ಇರಲಿಲ್ಲ.

ಶ್ರೀ ಡಿ. ಟಿ. ಸೀತಾರಾಮರಾವ್.—ಹನುಮಯ್ಯನವರು ಕ್ಲಾರಿಫಿಕೇಷನ್ ಕೇಳಿದರು. ಅದಕ್ಕೆ ಸಮಂಜಸವಾದ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಿತ್ತು. ಅದರ ಬದಲು ಹೊರಗಡೆ ಹಾಕುತ್ತೇನೆಂದು ಹೇಳಿದ್ದರಿಂದ ತಪ್ಪು ತಿಳಿದುಕೊಂಡಿದ್ದಾರೆ; ತಪ್ಪು ಭಾವನೆ ಬಂದಿದೆ. ಒಬ್ಬ ಹರಿಜನ ಸದಸ್ಯರ ಗೌರವಕ್ಕೆ ಆಗಿರತಕ್ಕ ಅನ್ಯಾಯವನ್ನು, ವಿಧಿಯಿಲ್ಲದೆ ಹರಿಜನ ಮಂತ್ರಿಗಳು ಕಾಪಾಡುವುದಕ್ಕೆ ಪ್ರಯತ್ನ ನಡೆಸಿದರೇ ಹೊರತು.....

Sri C. M. ARUMUGHAM (Kolar Gold Fields).—I want to have a clarification.

ಶ್ರೀ ಡಿ. ಟಿ. ಸೀತಾರಾಮರಾವ್.—ಇಡಿಯ ಸಂಸ್ಥಾನಕ್ಕೇ ಬಹಳ ಅವಮಾನವಾಗಿದೆ. ಸ್ವಲ್ಪ ತಾಪು ಸರಿಯಾಗಿ ತರಡೂದು ಮಾಡಬೇಕು. ರಾಚಯ್ಯನವರಿಗೆ ಉದ್ದೇಶಪಟ್ಟು ಹೇಳಬೇಕು ಎಂದು ಉದ್ದೇಶ ವಿರಲಿಲ್ಲ. ಹನುಮಯ್ಯನವರ ಪ್ರಶ್ನೆ ಬಂದದ್ದರಿಂದ, ಯಾವರೀತಿಯಲ್ಲಿ ಅವರಿಗೆ ರಕ್ಷಣೆ ಕೊಡಬೇಕು ಮತ್ತು ಹರಿಜನ ಮೆಂಬರಿಗೆ ರಕ್ಷಣೆ ಕೊಡಬೇಕಾದುದು ತಮ್ಮ ಕರ್ತವ್ಯವೆಂದು ತಿಳಿದುಕೊಂಡು ಅವರು ಆರೀತಿ ಹೇಳಿದರೇ ವಿನಾ, ಇನ್ನು ಯಾವ ಉದ್ದೇಶದಿಂದಾಗಲೀ, ಆ ಅವಕಾಶವನ್ನು ದುರುಪಯೋಗ ಪಡಿಸಿಕೊಳ್ಳಬೇಕೆಂದಾಗಲೀ, ಹೇಳಿದಹಾಗೆ ಕಂಡುಬರಲಿಲ್ಲ. ಅಧ್ಯಕ್ಷರು ಹೇಳಿದ್ದು ಸಂಸ್ಥಾನಾಮಳೆ ಇವತ್ತು ದೊಡ್ಡ ಅಡ್‌ವರ್ಟೈಸ್‌ಮೆಂಟಾಗಿ ಹನುಮಂತಯ್ಯನವರನ್ನು ಹೊರಗೆ ಹಾಕುತ್ತೇವೆಂದು ಹೇಳಿದರು ಎಂಬ ರೂಪದಲ್ಲಿ ಬಂದಿದೆ. ಆದರೆ ಸದಸ್ಯರ ಗೌರವವನ್ನು ಕಾಪಾಡತಕ್ಕ ಭಾರವನ್ನು ವಹಿಸಿಕೊಂಡು, ಸದಸ್ಯರ ಪರವಾಗಿ ರಾಚಯ್ಯನವರು ಸರ್ವಪ್ರಯತ್ನವನ್ನೂ ನಡೆಸಿದರು. ಇವೆರಡಕ್ಕೂ ಸಮಜಾಯಿಶಿ ಕೊಟ್ಟರೆ ಒಳ್ಳೆಯ ವಾತಾವರಣವಾಗುತ್ತದೆ.

ಅಧ್ಯಕ್ಷರು.—ನನ್ನ ಬಗ್ಗೆ ಏನೇನೋ ತಿಳಿದು ಕೊಂಡ ಹಾಗೆ ಕಾಣುತ್ತದೆ. ಆದರೆ ನನಗಾದರೂ ನನ್ನ ಸ್ವಂತದ್ದು ಯಾವುದೂ ಇರಲಿಲ್ಲ. ಕೇವಲ ಛೇರಿಗೆ ಒಂದು ರಿಫ್ಲೆಕ್ಷನ್ ಆಯಿತು ಎಂದು ಮಾತನಾಡಿದೆನೇ ಹೊರತು, ಎರಡನೆಯ ಉದ್ದೇಶವಿರಲಿಲ್ಲ. ಶ್ರೀಮಾನ್ ರಾಚಯ್ಯನವರೂ ಸದುದ್ದೇಶದಿಂದ ಆಡಲಿಲ್ಲವೆಂದು ನಾನು ತಿಳಿದುಕೊಳ್ಳುವುದಿಲ್ಲ; ಮಾತಿನ ಅರ್ಥ ರಿಫ್ಲೆಕ್ಷನ್ ಆನ್‌ದಿಚೇರ್ ಆಯಿತು ; ಅದಕ್ಕೆ ಹೇಳಿದೆ. ಅವರು ಸದುದ್ದೇಶದಿಂದ ಮಾತನಾಡಲಿಲ್ಲ, ಗೌರವ ತಪ್ಪಿ ಮಾತನಾಡಿದರು ಎಂದು ಹೇಳಲಿಲ್ಲ. ಒಟ್ಟಿನ ಅರ್ಥ ನೋಡಿದರೆ ಹಾಗೆ ಇತ್ತು ಎಂದು ಹೇಳಿದನೇ ಹೊರತು, ದುರುದ್ದೇಶದಿಂದ ಯಾರನ್ನೇ ಅವಮಾನ ಮಾಡಬೇಕು ಎಂದು ನನ್ನ ಮನಸ್ಸಿನಲ್ಲಿಲ್ಲ; ಎಲ್ಲ ಸದಸ್ಯರೂ ಒಂದೇ ಎಂದು ತಿಳಿದು ಕೊಂಡಿದ್ದೇನೆ. ಗಡಿಬಿಡಿಯಲ್ಲಿ, ಕೆಲಸದ ಒತ್ತಡದಲ್ಲಿ, ಪ್ರಶ್ನೆ ಟೈಮಿನಲ್ಲಿ ಒತ್ತಾಯವಿರುವುದರಿಂದ, ಸ್ವಲ್ಪ ತಾಳ್ಮೆಯಿಂದ ತಾವು ಇರಬೇಕಾಗುತ್ತದೆ. 20—25 ಪ್ರಶ್ನೆಗಳಿರುವುದರಿಂದ ಅವುಗಳನ್ನು ಅನುಕೂಲತೆಯಿಂದ ಮುಗಿಸಲಿಕ್ಕೆ ಟೈಮ್ ಲಿಮಿಟ್ ಹಾಕುತ್ತೇನೆ. "ಕುಳಿತುಕೊಳ್ಳಿ ಸ್ವಾಮಿ, ಪ್ರಶ್ನೆ ಮುಂದೆ ಹೋಯಿತು, ಮತ್ತೊಂದು ಪಶ್ನೆಗೆ ಬಂದಿದ್ದೇವೆ" ಎಂದು ಹೇಳಿದರೆ ಯಾರೂ ತಪ್ಪು ತಿಳಿದುಕೊಳ್ಳಬಾರದು. ಕೊಶ್ಚನ್‌ಲಿಸ್ಟನ್ನು ಮುಗಿಸುವ ದೃಷ್ಟಿಯಿಂದ ಹಾಗೆ ಮಾಡುತ್ತೇನೆ.

ಶ್ರೀ ಟಿ. ಹನುಮಯ್ಯ.—ಕೊಶ್ಚನ್ ಕೇಳಿದೆನೇ, ಇಲ್ಲವೇ, ಹೇಳಿ. ಹೇಳದೆ ಇರತಕ್ಕಂಥ ಮಾತನ್ನು ತಾವು ಹೇಳಬೇಡಿ.

ಅಧ್ಯಕ್ಷರು.—ನಾನು ಜನರಲ್ ಆಗಿ ಹೇಳಿದೆ. ಏನು ಕೇಳಿದಿರಿ, ಏನು ಬಿಟ್ಟಿರಿ ಈಗ ಹೇಳುವುದಕ್ಕಾಗುವುದಿಲ್ಲ. ಶ್ರೀಮಾನ್ ನಾರಣಪ್ಪನವರಿಗೆ ಪ್ರಶ್ನೆ ಕೇಳಲಿಕ್ಕೆ ಅವರಿಗೆ ಟೈಮ್ ಕೊಡಲಿಲ್ಲ ಎಂದು ತಾವು ಮಾತನಾಡಿದಿರಿ.

ಶ್ರೀ ಟಿ. ಹನುಮಯ್ಯ.—ನಾನು ಹೇಳದೆ ಇರತಕ್ಕಂಥಾದ್ದನ್ನು ಉತ್ಪ್ರೇಕ್ಷೆ ಮಾಡಿಕೊಂಡು ಹೇಳಬೇಡಿ. ಕೊಶ್ಚನ್ ಕೇಳಿದೆನೇ ಇಲ್ಲವೇ ?

Sri N. G. NARASIMHE GOWDA.—I rise to a point of order. ಮೊನ್ನೆ ಐದು ಆರು ದಿವಸಗಳ ಕೆಳಗೆ ನನ್ನ ಮೇಲೆ ನಡೆದಿರಕ್ಕಂಥ ಸ್ಪೀಕರ್ ರೂಲಿಂಗ್ ವಿಷಯದಲ್ಲಿ ಹೇಳುತ್ತೇನೆ. ನಾನು ಆ ದಿವಸ ಕಠಿಣವಾದ ಮಾತುಗಳನ್ನಾಗಲಿ

ಕೆಟ್ಟ ಶಬ್ದಗಳನ್ನಾಗಲೀ ಯಾವ ಕಾರಣದಿಂದಲೂ ಉಪಯೋಗಿಸಿಲ್ಲ.

ಪ್ರೊಸೀಡಿಂಗ್ಸ್ ತೆಗೆಸಿ ನೋಡಿಸಿ, ಗೊತ್ತಾಗುತ್ತದೆ. ನಮ್ಮ ಪಾರ್ಟಿಯ ಪ್ರಿನ್ಸಿಪಲ್ ಮೇಲೆ ತಾವು ನಡೆಯುತ್ತಾ ಇಲ್ಲ ಎಂದು ಹೇಳಿದ ಒಂದೇ ಒಂದು ಶಬ್ದಕ್ಕೆ ನನ್ನನ್ನು ಹೊರಗೆ ಹಾಕಿದಿರಿ. ಆದರೆ ನಾನು ಸ್ಪೀಕರ್ ಪೀಠಕ್ಕೆ ಗೌರವಕೊಟ್ಟೆ, ನಮ್ಮ ಪಾರ್ಟಿಯವರೂ ತಲೆಬಾಗಿದರು. ಆದರೆ ನಿನ್ನೆದಿವಸ ಚೇರ್ ರೂಲಿಂಗ್ ಕೊಟ್ಟಿದ್ದರ ಮೇಲೆ ಸಣ್ಣ ವಿಚಾರವನ್ನು ದೊಡ್ಡದಾಗಿ ಮಾಡಿ, ಹೀಗೆ ವ್ಯಾಪ್ತಿಯಾಗುತ್ತದೆ ಎನ್ನುವುದನ್ನು ನೋಡಿಕೊಂಡು, ನಾನು ಹೇಳಿದ ಮಾತಿನಲ್ಲಿ ಏನು ತಪ್ಪಿದೆ ಎನ್ನುವುದನ್ನು ಹೇಳಿ, ತಮ್ಮ ರೂಲಿಂಗನ್ನು ರಿವೈಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—Order, order. ತಪ್ಪು ಇರುವುದು ಬೇರೆ ಪ್ರಶ್ನೆ. ಶ್ರೀಮಾನ್ ನರಸಿಂಹೇಗೌಡರು ಬೇರೆ ಪ್ರಶ್ನೆಗೆ ಹೋದರು. ಅದು ಯಾವುದೂ ಬೇಡ. ಈಗ ಸಾಕಷ್ಟು ಆಗಿದೆ. ಮುಂದಿನ ಪ್ರಶ್ನೆಗೆ ಹೋಗುತ್ತೇನೆ. ಒಂದು ಮಾತನ್ನು ಹೇಳುತ್ತೇನೆ. ನಾನು ಕೆಲಸದ ಯಾವುದೋ ಗಡಿಬಿಡಿಯಲ್ಲಿಏನಾದರೂ ಹೆಚ್ಚು ಕಡಮೆ ಮಾತನಾಡಿದ್ದರೆ, ವೇಳೆ ಕೊಡದಿದ್ದರೆ, ಏನಾದರೂ ನನ್ನ ಕಡೆಯಿಂದ, ಧೋರಿನಿಂದ ತಪ್ಪು ಆಗಿದ್ದರೆ ನನ್ನ ಜವಾಬ್ದಾರಿ ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಹಾಗೆ ನಾನೂ ಕೂಡ ವಿಚಾರ ಮಾಡಿ, ತಪ್ಪುಗಳನ್ನು ಒಪ್ಪಿಕೊಳ್ಳುತ್ತೇನೆಂದು ಹೇಳಿದ್ದೇನೆ. ಏಕೆಂದರೆ ಯಾರು ಈ ಪೀಠದ ಮೇಲೆ ಕುಳಿತುಕೊಳ್ಳುತ್ತಾರೋ, ಅವರು ತಪ್ಪುಮಾಡಬಾರದು. He should not suffer from arrogance. ಅವನಿಗೆ ಆರೊಗೆನ್ಸ್ ಇರಬಾರದು. ಆ ಮನುಷ್ಯ ಕೋ ಆಪರೇಟೀವ್ ಆಗಿರಬೇಕು; ಫ್ರೆಂಡ್‌ಲಿ ಇರಬೇಕು; ಎಮಿಯಬಲ್ ಇರಬೇಕು ಎನ್ನುತ್ತೇನೆ. ಒಂದೊಂದು ವೇಳೆ ಕೆಲಸದಲ್ಲಿ ಆ ತರಹ ತಪ್ಪು ನಡೆಯುವುದಿಲ್ಲವೆಂದು ಹೇಳುವುದಿಲ್ಲ. ಆ ಸಮಯದಲ್ಲಿ ಯಾರಿಂದಲೋ ತಪ್ಪು ಆಗಿರಬಹುದು. ಹೇಳಿರಬಹುದು, ಮಾಡಿರಬಹುದು, ಅದನ್ನು ತೋರಿಸಿಕೊಡಬೇಕು. ತೋರಿಸಿ ಕೊಟ್ಟಮೇಲೆ ಆದರೆ ನಿಜವಾಗಿ ತಪ್ಪನ್ನು ಒಪ್ಪಿಕೊಂಡು ಇಲ್ಲಿರುವಂಥವರೆಲ್ಲರ ಜೊತೆಗೆ ಸೌಹಾರ್ದದಿಂದ ನಡೆಯುವುದಕ್ಕೆ ಸಿದ್ಧನಿದ್ದೇನೆ; ಅದನ್ನು ಒಪ್ಪಿಕೊಳ್ಳುತ್ತಲೇ ಬಂದಿದ್ದೇನೆ. ಒಮ್ಮೆ ಆದ ವಿಷಯವನ್ನು ಜಾಸ್ತಿಯಾಗಿ ಬೆಳೆಸುವುದು ಅನೇಕ ರೀತಿಯಾಗಿ ಅರ್ಥ ಮಾಡಿಕೊಳ್ಳುವುದು ಸರಿಯಲ್ಲ. ಈಗ ಏನೇನು ಆಗಿದೆ, ಯಾರುಯಾರು ಏನೇನು ಹೇಳಿದ್ದೀರಿ, ಆ ವಿಷಯವನ್ನುವಿಚಾರ ಮಾಡಿ ನನ್ನಿಂದ ತಪ್ಪುಇದ್ದರೆ ಒಪ್ಪಿಕೊಳ್ಳುತ್ತೇನೆ ಎಂದು ಹೇಳುತ್ತೇನೆ. ತಪ್ಪು ಎಲ್ಲರಿಂದಲೂ ಆಗುತ್ತದೆ; ನಮ್ಮಿಂದ ಆಗುತ್ತದೆ, ಎಲ್ಲರಿಂದಲೂ ಆಗುತ್ತದೆ ಅಂಥದನ್ನು ಎಲ್ಲರೂ ಸರಿ ಮಾಡಿಕೊಂಡು ಭ್ರಾತೃ ಭಾವದಿಂದ ನಡೆದುಕೊಳ್ಳ ಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಹನುಮಯ್ಯ.—ಸಾರ್ವಭೌಮತ್ವ ಏನು ?

Sri B. K. PUTTARAMIYA.—I rise to a point of order.

Mr. SPEAKER.—Order, order.

Sri KADIDAL MANJAPPA.—I do not think there is any need for further discussion on this matter.....

***Sri M. RAMAPPA** (Harihar).–When there is a point of order, I cannot understand why he should not be given a chance. Responsible member ಮಾತನಾಡುವಾಗ ಅವರಿಗೆ ಅವಕಾಶ ಕೊಡದೆ, ಮಿನಿಸ್ಟರ್ ಹೇಳುವುದಕ್ಕೆ ಅವಕಾಶ ಕೊಡುತ್ತೀರಿ. ಈ ರೀತಿ ಮಾಡುವುದರಿಂದ ಅಸೆಂಬ್ಲಿಯಲ್ಲಿ ಗಲಾಟೆಯಾಗುವುದಕ್ಕೆ ಕಾರಣವಾಗುತ್ತದೆ.

ಸ್ಪೀಕರ್‌ಮೇಲೆ No confidence motion ಇಲ್ಲದೇ ಇರುವಾಗ ಸ್ಪೀಕರ್ ಅವರ conduct ವಿಷಯದಲ್ಲಿ ಇಷ್ಟೊಂದು ಗಲಾಟೆ ಯಾಗುವುದಕ್ಕೇನು ಕಾರಣ ? ಇದಕ್ಕೆ ನೀವು ಏಕೆ ಅವಕಾಶ ಕೊಟ್ಟಿರಿ ಎಂದು ಕೇಳುತ್ತೇನೆ. ರೂಲ್ಸ್ ಪ್ರಕಾರ ನಡೆದರೆ ಸಭೆಯಲ್ಲಿ ಈ ರೀತಿ ಗಲಾಟೆಯಾಗುವುದಕ್ಕೆ ಅವಕಾಶ ವಿರುವುದಿಲ್ಲ. ಸ್ಪೀಕರ್‌ಮೇಲೆ ಯಾವ no confidence motion ಕೂಡ ಇಲ್ಲದೇ ಇರುವಾಗ ನಿಮ್ಮ ಮೇಲೆ ಟೀಕೆ ಮಾಡುವುದಕ್ಕೇಕೆ ಅವಕಾಶ ಕೊಡಬೇಕಾಗಿತ್ತು ?

1-30 P.M.

Mr. SPEAKER.—I do not think there is any point of order involved in this.

***Sri B. K. PUTTARAMIYA.**—Is it a point of disorder, Sir ? ನಾನು ಹೆಚ್ಚು ಮಾತನಾಡುವುದಿಲ್ಲ. ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ನರಸಿಂಹೇ ಗೌಡರು ಪಿ.ಎಸ್.ಪಿ. ಗೆ ಸೇರಿದವರು. ಸ್ಪೀಕರ್ ಅವರು ಅವರನ್ನು ಸಭೆಯಿಂದ ಹೊರಗೆ ಹೋಗಬೇಕೆಂದು ಹೇಳಿದಾಗ ಗೌರವಯುತವಾಗಿ ಸಭಾಧ್ಯಕ್ಷರ ಅಪ್ಪಣೆಯಂತೆ ನದಸ್ಯರು ಹೊರಗೆ ಹೋದಾಗ ಅವರೂ protest ಮಾಡಲಿಲ್ಲ, ನಮ್ಮ ಪಾರ್ಟಿಯೂ protest ಮಾಡಲಿಲ್ಲ. ಅಂಥಾದ್ದರಲ್ಲಿ ಈಗ ಸಭೆಯಲ್ಲಿ ಈರೀತಿ ನಡೆಯುತ್ತಿದ್ದರೆ, ಇದು ಸರಿಯೇ ಅಥವಾ ಅಲ್ಲವೆ ಎಂಬುದನ್ನು ನೋಡಬೇಕು. ಸಭೆಯ ಗೌರವವನ್ನು ಕಾಪಾಡಬೇಕು. ಒಂದು ವೇಳೆ ಈ ರೀತಿ ಚರ್ಚೆ ನಡೆಯಬೇಕಾದರೆ, let them move a no-confidence motion against the Speaker. If that is allowed, let them speak on the floor of the House. I cannot tolerate this sort of agitation. The Speaker should not allow such things to happen in this House.

ಹೊರಗೆ ಹಾಕ ಬೇಕಾಗುತ್ತದೆ ಎಂದು ಹೇಳಿದುದಕ್ಕೇ ಇಷ್ಟು ಗಲಾಟೆಏಕೆ ? ಹೊರಗೆ ಹಾಕಲ್ಪಟ್ಟವರು ಕೂಡ ಹೀಗೆ ಮಾಡಲಿಲ್ಲ.

(Sri B. Rachiah and Sri Mallaradhya were standing.)

Mr. SPEAKER.—Please sit down.

***Sri J.B. MALLARADHYA.**—Sir, an incident like this is unparalleled in the history of democratic parliamentary practice. Rightly or wrongly the Chair has given a ruling. It is incumbent upon every member of the House, however high and mighty he may be, to take it decently.

Mr. SPEAKER.—There are certain things which happen and which are calculated to harm the dignity of the Chair and the decorum of the House, and it is this aspect which distresses us and this House. I want you all to allow the proceedings to go on now. We are on the point of proceeding on to the other items. The points which are being raised are rather such that these ought not to have been raised in the House. I have already made it clear that if I make a mistake, it is for the Hon'ble Members to come and approach me or call me in a common place where we can discuss. After all, it is the duty of every member to keep the dignity and decorum of the House. I have a duty to keep the dignity and decorum of the House. In my duty, whatever I do, I inform the House and I do it *bona fide* and not in a bad spirit. In the discharge of my duties, if I happen to offend certain Hon'ble Members, the only course open to them is to approach me and convince me that I have wronged them. If what they say is correct, I am always there to make amends. I want all of you to work together as brothers and transact the business. Let us close this chapter and let us not raise any points of order or show feelings—one against the other. I request the Hon'ble Members to keep calm and cool.

Sri C. J. MUCKANNAPPA.—Sir, I put a question which went unanswered. ಎಷ್ಟು ಪ್ರಶ್ನೆಗಳಿಗೆ ಉತ್ತರಗಳು ಬಂದು ಸಿದ್ಧವಾಗಿವೆ ಎಂದು ನಾನು ಕೇಳಿದೆ, ಅದಕ್ಕೆ ಉತ್ತರ ಬರಲಿಲ್ಲ.

ಅಧ್ಯಕ್ಷರು.—420 ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ, ಇನ್ನೂ 86 ಪ್ರಶ್ನೆಗಳಿಗೆ ಉತ್ತರ ಬರಬೇಕಾಗಿವೆ. ಆಫೀಸಿಗೆ ಇನ್ನೂ ಎಷ್ಟು ಪ್ರಶ್ನೆಗಳಿಗೆ ಉತ್ತರ ಬಂದಿವೆ ಎಂಬುದು ಗೊತ್ತಿಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ಸ್ವಾಮಿ, ಯಾರೂ ಮಾತನಾಡ ಬಾರದೆಂದು ಹೇಳಿದಿರಿ, ಆದರೆ ಶ್ರೀಮಾನ್ ಮಲ್ಲಾರಾಧ್ಯರು ಮಾತನಾಡಲು ಅವಕಾಶ ಕೊಟ್ಟಿರಿ. ಶ್ರೀಮಾನ್ ರಾಜಯ್ಯನವರು ಮಾತನಾಡಲು ಅವಕಾಶ ಕೊಡಲಿಲ್ಲ. ಈಗ ಯಾರು ಸಭೆಯ ಘನತೆಗೆ ಕುಂದಕ ತಂದಿರುವುದು ?

ಅಧ್ಯಕ್ಷರು.—ಶ್ರೀಮಾನ್ ಮಲ್ಲಾರಾಧ್ಯರಿಗೆ ಅವಕಾಶ ಕೊಟ್ಟರು, ಶ್ರೀಮಾನ್ ರಾಜಯ್ಯನವರಿಗೆ ಕೊಡಲಿಲ್ಲ ಮುಂತಾದ ಪ್ರಶ್ನೆಗಳನ್ನು ಈಗ ಮತ್ತೆ ತಾವು ಯಾರೂ ಎತ್ತಬಾರದು. ಯಾರು ಯಾರಿಗೆ ಹೇಗೆ ಹೇಗೆ ಅವಕಾಶ ಬರುತ್ತದೆಯೋ ಹಾಗೆ ನಡೆಯುತ್ತದೆ. ಆದುದರಿಂದ ಮತ್ತೆ ಇದೇ ವಿಷಯವನ್ನು ಚರ್ಚಿಸುವ ಬದಲು ಸಭೆಯ ಮುಂದಿನ ಕಾರ್ಯಕ್ರಮವನ್ನು ಮುಂದುವರಿಸೋಣ.

BUDGET ESTIMATES FOR 1960-61.

DEMANDS FOR GRANTS

DEMAND No. 21—MEDICAL

38. *Medical.*

Sri K. K. HEGDE (Minister for Health).—Sir, I beg to move:

> "That a sum not exceeding Rs. 3,10,57,000 be granted to the Government to defray the charges which will come in course of payment during the year ending 31st day of March 1961, in respect of 'Medical'."

Mr. SPEAKER.—Motion moved:

> "That a sum not exceeding Rs. 3,10,57,000 be granted to the Government to defray the charges which will come in course of payment during the year ending 31st day of March 1961, in respect of 'Medical'."

I may inform the House that Demands Nos. 22 and 24 are also before the House.

Sri C. J. MUCKANNAPPA (Gubbi).—Sir, yesterday, you were pleased to tell us—you allowed only two Independents out of 36. "It is enough" you said "two people on behalf of the independents—it is not recognised and it is my discretion". May I know what is the procedure you are following in picking and choosing the members? Hitherto you were telling some time would be apportioned for discussion. But so far not even a single procedure has been adopted. That is why, Sir, since four or five days, we are awaiting your kind discretion in just allowing equal opportunity for all the members to express.

Mr. SPEAKER.—I am getting a note prepared—from the Governor's Address down to this day. Sometimes